ಅಂದು ಬೆಳಗಿನಜಾವ ರಂಗಯ್ಯ ನನ್ನನ್ನು ಎಬ್ಬಿಸಿದಾಗ, ರಾಮ, ಲಕ್ಷ್ಮಣ, ಸೀತೆ ನಮ್ಮ ಬೀದಿಯ ಅಂಚಿನಲ್ಲಿರುವ ಒಂದು ಮನೆಯಿಂದ ಇಳಿದು ಪೂರ್ವದ ಕಡೆ ಕಾಡಿಗೆ ಹೋಗುತ್ತಿದ್ದರು. ಪಾರ್ವತಿ ಅಮ್ಮನ ಗುಡಿಯನ್ನು ದಾಟಿ, ಶಾಲೆಯನ್ನೂ ಹಾದು, ಕಾಲುವೆಯ ದಾರಿಯಲ್ಲಿ ಆ ಮೂವರೂ ಹೋಗುತ್ತಿದ್ದಾಗ ನನಗೆ ಗಂಟಲಲ್ಲಿ ನೋವುಂಟಾದಂತೆ ಅನಿಸುತ್ತದೆ. ಮುಖವನ್ನು ತಿರುಗಿಸಲು ಆಗಲಿಲ್ಲ. ರಂಗಯ್ಯ ಭುಜವನ್ನು ಹಿಡಿದು ಬಲವಾಗಿ ಅಲ್ಲಾಡಿಸಿದ್ದರಿಂದ ಎಚ್ಚರಗೊಂಡೆ. ಛೇ! ತುಂಬಾ ಬೆಳಗಾಗಿತ್ತು. ರಂಗಯ್ಯ ನಗುತ್ತಾ ನಿಂತಿದ್ದ. ನಡಿ ನಡಿ ಎಂದು ಅವಸರ ಮಾಡಿದ.

ನಾಚ್ಚಿಯಾರಮ್ಮಾ ಚೊಂಬಿನ ತುಂಬ ಮೊಸರು ತಂದಿಟ್ಟಳು. ಇಬ್ಬರೂ ಹೊಟ್ಟೆ ತುಂಬಾ ಕುಡಿದು ಹೊರಟೆವು.

ರಂಗಯ್ಯ ನಮ್ಮ ಭಾವ; ಮನೆಗೆ ಬರುವ ಅಳಿಯ. ನಾಚ್ಚಿಯಾರಮ್ಮಾಳನ್ನು ಇವನಿಗೆ ಕೊಡಲಿದ್ದೇವೆ. ಇವನೂ ನಾಚ್ಚಿಯಾರಮ್ಮಾನ ಮೇಲೆ ಪ್ರಾಣವನ್ನೇ ಇಟ್ಟಿದ್ದಾನೆ. ಅವಳೂ ಹಾಗೆಯೇ.

'ಪುಲ್ಲೈ'ಯನ್ನು, 'ಮಯಿಲೈ'ಯನ್ನು ಹಿಡಿದು ರಂಗಯ್ಯ ಬಂಡಿಯ ನೊಗಕ್ಕೆ ಕಟ್ಟುತ್ತಾನೆ. ಅವೆರಡು ನಮ್ಮ ದೊಡ್ಡಿಯಲ್ಲಿ ಹುಟ್ಟಿದವು. ಒಂದಕ್ಕೆ ಎರಡು; ಮತ್ತೊಂದಕ್ಕೆ ನಾಲ್ಕು ಹಲ್ಲುಗಳು. ಬಂಡಿ ಜಿಗಿಯುತ್ತಾ ಹೊರಟಿತು. ಊರುಗೋಲನ್ನು ಹಿಡಿದು ಹತ್ತಿ, ಎರಡರ ಹಗ್ಗಗಳನ್ನೂ ಒಂದಾಗಿ ಹಿಡಿದುಕೊಂಡು ಬಗ್ಗಿ ನಿಂತೆ. ಕೋಲಿನಲ್ಲಿದ್ದ ಕಬ್ಬಿಣದ ಬಳೆಗಳು ಕುಲುಕಿ ಶಬ್ದ ಎಬ್ಬಿಸಿದವು. ಗಾಡಿಯ ವೇಗಕ್ಕೆ ಉಂಟಾದ ಕುಲುಕಿಗೆ ದೇಹ ಅದುರಿತು. ಜಲ್ಲಿಕಲ್ಲಿನ ದಾರಿಯನ್ನು ದಾಟಿ ತಾರು ರಸ್ತೆಯ ಅರ್ಧಕ್ಕೆ ಬಂದ ಮೇಲೆ ಎತ್ತುಗಳು ನಿಧಾನವಾಗಿ ಹೆಜ್ಜೆ ಇಟ್ಟವು.

ಕೊಳದ ಹಾದಿಯ ಮಧ್ಯದಲ್ಲಿ ಬನ್ನಿಮರದ ಸಮೀಪ ಗಾಡಿಯನ್ನು ನಿಲ್ಲಿಸಿ, ಎತ್ತುಗಳನ್ನು ಮೇವಿಗಾಗಿ ಕೊಳಕ್ಕೆ ಕರೆದುಕೊಂಡು ಹೋದೆ.

ಗದ್ದೆಯಲ್ಲಿ ಹತ್ತಿಕಾಯಿ ತೆಗೆಯುವ ಹೆಂಗಸರು ಜಾನಪದ ಗೀತೆಗಳನ್ನು ಹಾಡುತ್ತಿದ್ದರು. ಅವರ ನಡುವೆ ನಾಚ್ಚಿಯಾರಮ್ಮಾ ಸೀರೆಯನ್ನು ಎತ್ತಿ ಸೊಂಟಕ್ಕೆ ಸಿಕ್ಕಿಸಿಕೊಂಡು ಹತ್ತಿಕಾಯಿ ಕೀಳುತ್ತಿದ್ದಳು. ಹತ್ತಿ 'ಕಾಡಾಗಿ' ಸಿಡಿದಿತ್ತು; ಹಸಿರು ಬಾನಲ್ಲಿ ನಕ್ಷತ್ರಗಳ ಹಾಗೆ. ರಂಗಯ್ಯ ತನ್ನ ಮಡಿಲಲ್ಲಿದ್ದ ಕಿರುಗತ್ತಿಯಿಂದ ಕರಿಬೇವಿನ ಕಡ್ಡಿಯನ್ನು ಹೊಸೆದು, ಹಲ್ಲುಜ್ಜಲು ತನಗೊಂದನ್ನು ಇಟ್ಟುಕೊಂಡು ನನಗೊಂದನ್ನು ಕೊಟ್ಟ. ಅದಲ್ಲದೆ ಮತ್ತೊಂದನ್ನು ಸಿದ್ಧಮಾಡಿ ಇಟ್ಟಿದ್ದ.

ಆಗ ಗೊಬ್ಬರಕ್ಕಾಗಿ ಬಿಟ್ಟ ಆಡುಕುರಿಗಳನ್ನು ಗದ್ದೆಯಿಂದ ಹೊರಗಟ್ಟುವ ಸಮಯ ಮೀರಿತ್ತು. ಎತ್ತುಗಳು ಹೊಟ್ಟೆ ತುಂಬ ಹುಲ್ಲು ಮೇದು ಬನ್ನಿಮರದ ನೆರಳಿನಲ್ಲಿ ಮಲಗಿ ಮೆಲುಕು ಹಾಕುತ್ತಿದ್ದವು.

ನಾಚ್ಚಿಯಾರಮ್ಮಾ, ಹತ್ತಿಯನ್ನು ಕರಿಬೇವಿನ ನೆರಳಿನಲ್ಲಿ ರಾಶಿಯಾಗಿಟ್ಟುಕೊಂಡು ಹಂಚಿ ಕೊಡುತ್ತಿದ್ದಳು. ಮಡಿಲ ಹತ್ತಿ, ಮಕ್ಕಳ ಹತ್ತಿ, ಕೈಹಿಡಿ ಹತ್ತಿ ಎಂದು ಹಂಚಿ ಹಾಕುವಾಗ, ಹಳ್ಳಿಯ ಹೆಂಗಸರು ಸಂತೋಷದಿಂದ ನಾಚ್ಚಿಯಾರಮ್ಮಾಳನ್ನು ಹರಸುತ್ತಾ ತೆಗೆದುಕೊಂಡು ಹೋದರು. ನಮ್ಮ ಮನೆಯಿಂದ ಬೇರೆ ಯಾರು ಬಂದು ಹಂಚಿ ಕೊಟ್ಟರೂ ಅವರು ಒಪ್ಪುತ್ತಿರಲಿಲ್ಲ. ಅವರಿಗೆ ನಾಚ್ಚಿಯಾರಮ್ಮಾಳೇ ಆಗಬೇಕು.

ಗೋಣಿಚೀಲಗಳಲ್ಲಿ ರಾಶಿ ರಾಶಿಯಾಗಿ ಹತ್ತಿಯನ್ನು ತುಂಬಿ ಮೂಟೆಕಟ್ಟಿ ಗಾಡಿಯಲ್ಲಿ ಏರಿಸಿಕೊಂಡು ಮನೆಯ ಕಡೆ ಹೊರಟೆವು. ಹಳ್ಳಿಯ ಹೆಂಗಸರು ಮೊದಲೇ ಹೊರಟುಹೋದರು. ನಾಚ್ಚಿಯಾರಮ್ಮಾಳೂ ನಾನೂ ಗಾಡಿಯ ಮೇಲೆ ಹತ್ತಿ ಹತ್ತಿಯ ಮೂಟೆಗಳ ಮೇಲೆ ಕುಳಿತುಕೊಂಡು ಊರುಗೋಲುಗಳನ್ನು ಹಿಡಿದುಕೊಂಡೆವು. ರಂಗಯ್ಯ ಗಾಡಿ ಓಡಿಸಿದ.

ಬಂಡಿ, ಹತ್ತಿಯನ್ನು ಮಡಿಲಲ್ಲಿ ತುಂಬಿಕೊಂಡು ದಾರಿಯಲ್ಲಿ ನಡೆದುಹೋಗುವ ಹೆಂಗಸರ ಗುಂಪನ್ನು ದಾಟಿ ಬಂದಿತು. ಅವರು ಬೇಕಂತಲೇ ಕುಡುಕರಂತೆ ತೂರಾಡುತ್ತಾ ನಡೆಯುತ್ತಾ ತಮಾಷೆಯಾಗಿ ಹಾಡುಗಳನ್ನು ಹಾಡಿಕೊಂಡು ಒಬ್ಬರನ್ನೊಬ್ಬರು ಗೇಲಿಮಾಡುತ್ತಾ ನೂಕುತ್ತಾ ಬರುತ್ತಿದ್ದರು. ದೊಡ್ಡೇರಮ್ಮನ ಗುಡಿಯ ಸಮೀಪಕ್ಕೆ ಬಂದಾಗ ರಂಗಯ್ಯ ಹಗ್ಗವನ್ನು ಮೊಳಕೈಗೆ ಸುತ್ತಿಕೊಂಡು ಎಳೆದು ಗಾಡಿಯನ್ನು ನಿಲ್ಲಿಸಿದ. ದೊಡ್ಡೇರಮ್ಮನ ಗುಡಿಯ ಜೂಜುಬೆ

